ನಿಶ್ಚಯವಾಗಿಯೂ ಅಲ್ಲಾಹು ದೇವಭಯವುಳ್ಳ, ಸ್ವಾವಲಂಬಿಯಾದ ಮತ್ತು ಗಮನ ಸೆಳೆಯಲು ಬಯಸದ ದಾಸನನ್ನು ಪ್ರೀತಿಸುತ್ತಾನೆ

ಸಅದ್ ಬಿನ್ ಅಬೂ ವಕ್ಕಾಸ್ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ. ಅವರು ಹೇಳಿದರು: ಅಲ್ಲಾಹನ ಸಂದೇಶವಾಹಕರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಹೀಗೆ ಹೇಳುವುದನ್ನು ನಾನು ಕೇಳಿದ್ದೇನೆ: "ನಿಶ್ಚಯವಾಗಿಯೂ ಅಲ್ಲಾಹು ದೇವಭಯವುಳ್ಳ, ಸ್ವಾವಲಂಬಿಯಾದ ಮತ್ತು ಗಮನ ಸೆಳೆಯಲು ಬಯಸದ ದಾಸನನ್ನು ಪ್ರೀತಿಸುತ್ತಾನೆ." [صحيح] [رواه مسلم]

ಸರ್ವಶಕ್ತನಾದ ಅಲ್ಲಾಹು ತನ್ನ ಕೆಲವು ದಾಸರನ್ನು ಪ್ರೀತಿಸುತ್ತಾನೆಂದು ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಹೇಳುತ್ತಾರೆ ಅವನು ದೇವಭಯವುಳ್ಳವರನ್ನು ಪ್ರೀತಿಸುತ್ತಾನೆ: ದೇವಭಯವುಳ್ಳವರು ಎಂದರೆ ಅವನ ಆಜ್ಞೆಗಳನ್ನು ಪಾಲಿಸುವವರು ಮತ್ತು ಅವನು ವಿರೋಧಿಸಿದ ವಿಷಯಗಳಿಂದ ದೂರ ಸರಿಯುವವರು. ಅವನು ಸ್ವಾವಲಂಬಿಯನ್ನು ಪ್ರೀತಿಸುತ್ತಾನೆ: ಸ್ವಾವಲಂಬಿ ಎಂದರೆ ಜನರನ್ನು ಅವಲಂಬಿಸದೆ ಕೇವಲ ಅಲ್ಲಾಹನನ್ನು ಮಾತ್ರ ಅವಲಂಬಿಸಿ, ಅಗತ್ಯಕ್ಕಾಗಿ ಅವನ ಹೊರತು ಇತರ ಯಾರ ಕಡೆಗೂ ತಿರುಗದವನು. ಅವನು ಗಮನ ಸೆಳೆಯಲು ಬಯಸದವನನ್ನು ಪ್ರೀತಿಸುತ್ತಾನೆ: ಗಮನ ಸೆಳೆಯಲು ಬಯಸದವನು ಎಂದರೆ ವಿನಮ್ರನು, ಅಲ್ಲಾಹನನ್ನು ಆರಾಧಿಸುವವನು, ತನಗೆ ಪ್ರಯೋಜನ ನೀಡುವ ಕಾರ್ಯಗಳನ್ನು ಮಾತ್ರ ಮಾಡುವವನು, ಇತರರು ತನ್ನನ್ನು ಗುರುತಿಸಬೇಕು, ಪ್ರಶಂಸಿಸಬೇಕು ಮತ್ತು ತನ್ನ ಬಗ್ಗೆ ಮಾತನಾಡಬೇಕು ಎಂದು ಬಯಸದವನು.

https://sunnah.global/hadeeth/kn/show/5545